# ಷಟ್‌ಚಕ್ರ ಸ್ವರೂಪ

ಭಾರತೀಯ ಅಧ್ಯಾತ್ಮ ಸಾಧನೆಯಲ್ಲಿ ಸಾಧಕರು ಅನೇಕ ಮಾರ್ಗಗಳನ್ನು ಅವಲಂಬಿಸಿರುವುದುಂಟು. ಸಾಧಕನಿಗೊಬ್ಬನಿಗೆ ಅಧ್ಯಾತ್ಮದ ಒಂದು ಮಾರ್ಗ ಅನುಕೂಲವಾದರೆ; ಮತ್ತೊಬ್ಬ ಸಾಧಕನಿಗೆ ಮತ್ತೊಂದು ಮಾರ್ಗ ಅನುಕೂಲವಾಗಬಹುದು. ಮಾರ್ಗಗಳು ಹಲವಾದರೂ ಗುರಿಯೊಂದೇ. ಸಾಧನಾಕ್ರಮಗಳು ಬೇರೆಬೇರೆಯಾದರೂ ಬ್ರಹ್ಮಭಾವವೊಂದೇ. ನಾವು ಹಲವು ಬಾರಿ 'ಷಟ್‌ಚಕ್ರ' ಎಂಬ ಮಾತನ್ನು ಆಗಾಗ್ಗೆ ಕೇಳಿರುತ್ತೇವೆ. ಅದರ ಹಿನ್ನೆಲೆ ಮುನ್ನೆಲೆಯಾಗಲೀ ಸ್ವರೂಪವಾಗಲೀ ತಿಳಿದಿರುವುದಿಲ್ಲ.

ಶಾಕ್ತ ಸಂಪ್ರದಾಯದಲ್ಲಿ 'ಷಟ್‌ಚಕ್ರ' ವಿಚಾರಗಳು ಬರುತ್ತವೆ. ಷಟ್ ಎಂದರೆ ಆರು. ದೇಹದ ವಿವಿಧ ಭಾಗಗಳಲ್ಲಿ 'ಚಕ್ರ'ದ ಆಕಾರದಲ್ಲಿ ಆರು ಮುಖ್ಯ ಸ್ಥಳಗಳಿವೆ. ಅವುಗಳು ಹೀಗಿವೆ: ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧಿ ಮತ್ತು ಆಜ್ಞಾ. ಈ ಆರು ಚಕ್ರಗಳನ್ನು ಅನುಭವದ ಮೂಲಕ ಸಾಕ್ಷಾತ್ಕಾರ ಮಾಡಿಕೊಳ್ಳಲು ಮಾತ್ರ ಸಾಧ್ಯ. ಇವು ಆತ್ಮಲಾಭ ಮತ್ತು ಬ್ರಹ್ಮಭಾವದ ಅಖಂಡ ಸ್ವರೂಪವೇ ಆಗಿವೆಯೆಂದು ಅದನ್ನು ತಿಳಿದವರು ಹೇಳುತ್ತಾರೆ. ಷಟ್‌ಚಕ್ರವು ದ್ವೈತ, ಅದ್ವೈತ ಮತ್ತು ದ್ವೈತಾದ್ವೈತ ಶ್ರೇಣಿಗಳಿಗಿಂತ ಸಂಪೂರ್ಣ ವಿಲಕ್ಷಣವಾಗಿದೆ; ಅವುಗಳಿಗೆ ಅತೀತವೂ ಆಗಿದೆ. ಷಟ್‌ಚಕ್ರ ಭೇದನದ ಅನುಭವ ಏನುಂಟೋ ಅದು ಸಮಸ್ತ ಜ್ಞಾನದ, ಸಂಪೂರ್ಣ ಅನುಭವದ, ಬುದ್ಧಿಯ ಎಲ್ಲಾ ಶ್ರೇಣಿಗಳಿಗೂ ಅಧಿಷ್ಠಾನವಾಗಿದೆ. ಇದು ಅಚಿಂತ್ಯ ಮತ್ತು ಅನಿರ್ವಚನೀಯ. ನಾವು ಇದನ್ನು ಬುದ್ಧಿಯ ಮೂಲಕ ಗ್ರಹಿಸಲು ಸಾಧ್ಯವಿಲ್ಲ. ಶಬ್ದಗಳಿಂದಲೂ ಅದನ್ನು ನಾವು ವರ್ಣಿಸಲಾರೆವು. ನಾವು ಷಟ್‌ಚಕ್ರದ ಅನುಭವವನ್ನು ಅಪರೋಕ್ಷ ಅನುಭೂತಿಯ ಮೂಲಕ ಮಾತ್ರ ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವೆಂದು ಆ ಮಾರ್ಗದಲ್ಲಿ ನಡೆದವರು ಹೇಳುತ್ತಾರೆ. ಅದರ ಮೂಲಸ್ವರೂಪವನ್ನು ನಾವೀಗ ಸ್ವಲ್ಪ ತಿಳಿಯೋಣ.

ಶಾಕ್ತ ಸಂಪ್ರದಾಯದಲ್ಲಿ ಮೂರು ಮುಖ್ಯ ಆಚಾರಗಳಿವೆ. ಕೌಲಾಚಾರ, ಸಮಯಾಚಾರ ಮತ್ತು ಮಿಶ್ರಾಚಾರ. ಈ ಆಚಾರಗಳು ಗುರು–ಶಿಷ್ಯರ ನಡುವೆ ಮಾತ್ರ ನಡೆಯುತ್ತವೆ. ಗುರುವಿನಿಂದ ದೀಕ್ಷೆ ಪಡೆದ ಶಿಷ್ಯನಿಗೆ ಮಾತ್ರ ಆಯಾಯ ಆಚಾರಗಳ ರಹಸ್ಯ ತಿಳಿದಿರುತ್ತದೆ. ಶಾಕ್ತತಂತ್ರದ ಸಾಧನೆ ಆಯಾ ಅಧಿಕಾರಿಗಳಿಗೆ ಮಾತ್ರ ಗೊತ್ತಿರುತ್ತದೆ. ಷಟ್‌ಚಕ್ರದ ವಿಷಯ 'ಕೌಲಾಚಾರ'ದಲ್ಲಿ ಸ್ಪಷ್ಟವಾಗಿ ಅಭಿವ್ಯಕ್ತಗೊಂಡಿದೆ. ವಾಮಮಾರ್ಗಗಳನ್ನು ಹಿಡಿದ ಕೆಲವು ಕೌಲರು ಪಂಚ'ಮ'ಕಾರಗಳನ್ನು ಆಚರಿಸುತ್ತಾರೆ. ಆದರೆ, ಶುದ್ಧಕೌಲರು ಇದನ್ನು ಸುತಾರಾಂ ಒಪ್ಪುವುದಿಲ್ಲ. ಪಂಚ'ಮ'ಕಾರಗಳನ್ನು (ಮದ್ಯ, ಮಾಂಸ, ಮೀನು, ಮುದ್ರಾ ಮತ್ತು ಮೈಥುನ) ಆಧ್ಯಾತ್ಮಿಕ ರಹಸ್ಯ ಸಾಧನೆಯೊಂದಿಗೆ ಹೇಳುವುದುಂಟು. ಕೌಲಾಚಾರದ ಪ್ರಮುಖ ಗ್ರಂಥವಾದ 'ಕುಲಾರ್ಣವ ತಂತ್ರ'ದಲ್ಲಿ ಪಂಚ'ಮ'ಕಾರಗಳ ಪ್ರತ್ಯಕ್ಷ ಪ್ರಯೋಗವನ್ನು ಖಂಡಿಸಿದೆ. 'ಕುಲ' ಎಂಬುದರ ಅರ್ಥ 'ಶಕ್ತಿ' ಅಥವಾ 'ಕುಂಡಲಿನಿ' ಎನಿಸಿಕೊಂಡರೆ; 'ಅಕುಲ'ದ ಅರ್ಥ 'ಶಿವ' ಎನಿಸಿಕೊಳ್ಳುತ್ತದೆ. ಯೋಗದ ಮೂಲಕ ಷಟ್‌ಚಕ್ರವನ್ನು ಭೇದಿಸಿ ಕುಂಡಲಿನೀ ಶಕ್ತಿಯನ್ನು ಸಹಸ್ರಾರದಲ್ಲಿರುವ ಶಿವನೊಂದಿಗೆ ಐಕ್ಯಗೊಳಿಸುವ ವ್ಯಕ್ತಿಯನ್ನು 'ಕೌಲ'ನೆಂದು ಕರೆಯುತ್ತಾರೆ. ಇದು ಕೌಲಾಚಾರದ ಸ್ಥೂಲಸ್ವರೂಪ.

ಇದಿಷ್ಟು ಷಟ್‌ಚಕ್ರದ ತಾಂತ್ರಿಕ ವಿವರಗಳು. ನಾನು ಮೊದಲೇ ಹೇಳಿದಂತೆ ಇದನ್ನು ಮಾತಿನಿಂದ ವರ್ಣಿಸಲಾಗದು. ನಾಭಿಯ ಕೆಳಗೆ 'ಕುಂಡಲಿನಿ' ಉಂಟಷ್ಟೆ. ಅದಕ್ಕೆ ಅಂಟಿಕೊಂಡಂತೆ ಮೂಲಾಧಾರ ಮೊದಲಾದವು ಬೆನ್ನುಹುರಿಯಿಂದ ಮೇಲುಮೇಲಕ್ಕೆ ಹರಡಿಕೊಂಡಿವೆ. ಅವುಗಳ ಅಕ್ಕಪಕ್ಕ ಇಡಾ–ಪಿಂಗಳ ಎಂಬ ನಾಡಿಗಳುಂಟು. ಕೌಲಸಾಧಕರು ಗುರುವಿನ ನೆರವಿನಿಂದ ಕುಂಡಲಿನಿಯನ್ನು ಎಚ್ಚರಗೊಳಿಸುತ್ತಾರೆ. ಒಂದೊಂದೇ ಚಕ್ರಗಳು ಭೇದನಗೊಳ್ಳುತ್ತ ಹೋಗುತ್ತವೆ. ಇದರ ಸಾಕ್ಷಾತ್ ಸ್ವರೂಪವನ್ನು ಬೆಳಗೆರೆ ಕೃಷ್ಣಶಾಸ್ತ್ರಿಗಳು ಕೃತಿಸಿರುವ 'ಯೇಗ್ದಾಗೆಲ್ಲಾ ಐತೆ' ಎಂಬ ಕೃತಿಯಲ್ಲಿ ನಾವು ಕಾಣಬಹುದು. ಮುಕುಂದೂರು ಸ್ವಾಮಿಗಳು ಸಂಜೆ ಭಜನೆ ವೇಳೆ ತತ್ತ್ವಪದವೊಂದನ್ನು ಹಾಡುತ್ತಾ ಅದನ್ನು ಅಭಿನಯದ ಮೂಲಕ ನಮಗೆ ಮನಗಾಣಿಸುತ್ತಾರೆ. ಅವರ ಮಾತುಗಳನ್ನು ನಾವು ಕೇಳೋಣ:

ಮೂಲ ಕುಂಡಲಿನಿಯ ಮೇಲು ಮುಖ ಮಾಡಿ
ಸಾಲಾದ ಕೋಣೆ ಕೋಣೆಯ ಹೊಗಿಸಿ...

ಈ ಹಾಡನ್ನು ಹಾಡುವಾಗಲೇ ತಮ್ಮ ಕೈಗಳಿಂದ ಶರೀರದ ಬೇರೆ ಬೇರೆ ಭಾಗಗಳನ್ನು ಮುಟ್ಟಿ ತೋರಿಸುವುದು ಅವರ ವಿಶೇಷವಾದ ರೀತಿಯಾಗಿತ್ತು. 'ಮೂಲ ಕುಂಡಲಿನಿಯನು' ಸೊಂಟದ ಸುತ್ತಲೂ ಕೈಯಾಡಿಸುತ್ತ, 'ಮೇಲು ಮುಖವ ಮಾಡಿ' ಸೊಂಟದಿಂದ ಮೇಲಕ್ಕೆ ಕೈಯಾಡಿಸಿ, 'ಸಾಲಾದ ಕೋಣೆ ಕೋಣೆಯ ಹೊಗಿಸಿ' ಷಟ್‌ಚಕ್ರ ಸ್ಥಾನಗಳನ್ನು ಮುಟ್ಟಿ, 'ಸಾಲುಚಕ್ರದ ಮೇಲಣಾಲಯದೊಳಗಿಹ' ಭ್ರೂಮಧ್ಯವನ್ನು ಮುಟ್ಟಿ, 'ನೀಲದ್ವಾರದೊಳೆಡೆಯಾಡುವನೆ' ಮೂಗಿನ ತುದಿಯಿಂದ ಮೇಲಕ್ಕೆ ಬೆರಳಾಡಿಸಿ, ಎರಡು ಕಣ್ಣುಗಳನ್ನು ಮುಚ್ಚಿ ಭ್ರೂಮಧ್ಯದಲ್ಲಿ ಬೆರಳಿಟ್ಟು ತೋರುವುದು. ಹೀಗೆ ಹಾಡುವಾಗ ಅಂಗಾಂಗಗಳನ್ನು ಮುಟ್ಟಿ ಮುಟ್ಟಿ ಹೇಳುವ ರೀತಿ, ಮಾತಿನಿಂದ ವಿವರಿಸುವುದಕ್ಕಿಂತಲೂ ನೇರ ಮತ್ತು ಸ್ಪಷ್ಟವಾಗಿ ಎಲ್ಲರಿಗೂ ತಿಳಿಯುತ್ತಿತ್ತು. ಸ್ವತಃ ಅನುಭವ ಇರುವವರಿಗೆ ಮಾತ್ರ ಸಾಧ್ಯವಾಗುವ ಈ 'ವಿಧಾನ' ಅವರಿಗೆ ಮಾತ್ರ ಸಹಜವೆನಿಸಿತ್ತು.'

ಷಟ್‌ಚಕ್ರದ ಸ್ವರೂಪ, ಕುಂಡಲಿನಿಯ ಎಚ್ಚರ, ಸಹಸ್ರಾರದ ಅಮೃತರಸ ಇವೆಲ್ಲ ಶಾಬ್ದಬೋಧೆಯಲ್ಲ. ನೂರಾರು ವರ್ಷಗಳಿಂದ ಸಾಧಕರು ಈ ದಾರಿಯಲ್ಲಿ ನಡೆದಿದ್ದಾರೆ. ಕನ್ನಡದ ನಿಜಗುಣ ಶಿವಯೋಗಿಗಳು ತಮ್ಮ ಷಟ್‌ಶಾಸ್ತ್ರದಲ್ಲಿಯೂ ಇತರ ತತ್ತ್ವಪದಕಾರರಲ್ಲಿಯೂ ಕುಂಡಲಿನಿ ವಿಚಾರ, ಷಟ್‌ಚಕ್ರ ಸ್ವರೂಪ, ಇಡಾ–ಪಿಂಗಳ ನಾಡಿಗಳ ಎಚ್ಚರ, ಸಹಸ್ರಾರದ ಅಮೃತವರ್ಷದ ವರ್ಣನೆಗಳಿವೆ. ಇವು ಶಾಕ್ತಲೋಕದ ಕಡೆಗೆ ನಮ್ಮನ್ನು ಕರೆದೊಯ್ಯುತ್ತವೆ. ನಾವು ಅಲ್ಲಿ ನಿಬ್ಬೆರಗಾಗಿ ನಿಲ್ಲುತ್ತೇವೆ ಅಷ್ಟೆ.!

■ ಪುರಂಜೀವಿ


